ಒ.ಎಸ್.ನಂಬ್ರಃ 68/2024
ಡಿ.ಡಬ್ಲ್ಯೂ ಃ 01

ದಿನಾಂಕಃ 21-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ

7. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಅಭಿಯೋಜಕರ ಕಛೇರಿಯಲ್ಲಿ ತಯಾರಾಗಿರುತ್ತದೆ. ಪ್ರಮಾಣ ಪತ್ರಕ್ಕೆ ಎ.ಪಿ.ಪಿ ಯವರು ಹಾಗೂ ನಾನು ಕಡತಗಳನ್ನು ನೋಡಿಕೊಂಡು ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣದಲ್ಲಿ ಹೇಳಿದಂತ ವಿಚಾರಗಳನ್ನು ಸಾಬಿತುಪಡಿಸಲು ದಾಖಲೆಗಳು ಇರುತ್ತವೆ.

8. ದಾವಾ ಎ ಮತ್ತು ಬಿ ಶೆಡ್ಯೂಲ್ ಗಳ ಸರ್ವೆ ನಂಬ್ರ 174/6 ರ ಪಹಣಿಯ ಕಲಂ.6 ರಲ್ಲಿ ದಾರಿ ಇದೆ ಎಂದು ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಎ ಮತ್ತು ಬಿಸಿ ಶೆಡ್ಯೂಲ್ ಆಸ್ತಿಗಳಲ್ಲಿ ಓಡಾಡುವ ಸಾರ್ವಜನಿಕ ರಸ್ತೆ ಇದೆ ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಮಾಹಿತಿ ಕೊಟ್ಟಿರುತ್ತೇನೆ. ಆ ಎರಡು ಆಸ್ತಿಗಳ ಆರ್ ಟಿ ಸಿ ಯನ್ನು ನಾನು ನೋಡಿರುತ್ತೇನೆ. ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಸಾರ್ವಜನಿಕ ರಸ್ತೆ ಇರುವ ಬಗ್ಗೆ ಕಂಡು ಬರುವುದಿಲ್ಲ. ದಾವಾ ಎ ಮತ್ತು ಬಿ ಶೆಡ್ಯೂಲ್ ಮಧ್ಯ ಇರುವ ಸರ್ವೆ ನಂಬ್ರ 174/6 ರಲ್ಲಿ ರಸ್ತೆ ಇರುವಂತೆ ಕಂಡು ಬರುತ್ತದೆ.

9. ಕಾರ್ಕಡ ಗ್ರಾಮದ ಸರ್ವೆ ನಂಬ್ರ 172/1 ಎ ರ ಪಹಣಿಯಲ್ಲಿ ರಸ್ತೆ ಇರುವ ಬಗ್ಗೆ ಕಂಡು ಬರುವುದಿಲ್ಲ. ಸರ್ವೆ ನಂಬ್ರ 172/1 ಎ ರ ಆಸ್ತಿಯ ಯಾವುದಾದರೂ ದಾಖಲೆಯಲ್ಲಿ ರಸ್ತೆ ಇರುವ ಬಗ್ಗೆ ಕಂಡು ಬರುತ್ತದಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬ್ರ 172/1 ಎ ಆಸ್ತಿಯನ್ನು ನಾನು ಅಳತೆ ಮಾಡಿಸಿರುವುದಿಲ್ಲ. ಯಾರಾದರೂ ಸದರಿ ಸರ್ವೆ ನಂಬ್ರ ದಲ್ಲಿ ಓಡಾಡುವ ಸಾರ್ವಜನಿಕ ರಸ್ತೆ ಇದೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ನಾನು ಹೋದಾಗ ಸಾರ್ವಜನಿಕರು ಓಡಾಡುವ ರಸ್ತೆ ಇತ್ತು ಎಂದು ನುಡಿಯುತ್ತಾರೆ.

10. ಸರ್ವೆ ನಂಬ್ರ 172/1 ಎ ರಲ್ಲಿ ಆ ರಸ್ತೆ ಇತ್ತು ಎಂದು ನಮ್ಮ ವಿಲೇಜ್ ಎಕೌಂಟೆಂಟ್ ಹೇಳಿರುತ್ತಾರೆ ಹಾಗೂ ನಾನು ದಿಶಾಂಕದಲ್ಲಿ ನೋಡಿ ತಿಳಿದುಕೊಂಡಿರುತ್ತೇನೆ. ನಾನು ನೋಡಿದ ರಸ್ತೆಯನ್ನು ಯಾರುೂ ನಿರ್ಮಾಣ ಮಾಡಿರುವುದಿಲ್ಲ, ಜನರು ಆ ರಸ್ತೆಯಲ್ಲಿ ಓಡಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬ್ರ 172/1 ಎ ಒಟ್ಟು ವಿಸ್ತೀರ್ಣ 1 ಎಕರೆ 49 ಸೆಂಟ್ಸ್ ಇರುತ್ತದೆ. ಒಟ್ಟು ಆಸ್ತಿಯ ಯಾವ ಭಾಗದಲ್ಲಿ ರಸ್ತೆ ಇರುತ್ತದೆ ಎಂದರೆ ಸಾಕ್ಷಿ ಈಗ ನನಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

11. ಗ್ರಾಮ ಲೆಕ್ಕಾಧಿಕಾರಿಗಳು ಯಾವ ಆಧಾರದ ಮೇಲೆ ದಾರಿ ಇರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಕಂದಾಯ ದಾಖಲೆಗಳ ಆಧಾರದ ಮೇಲೆ ದಾರಿ ಇರುತ್ತದೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಕಂದಾಯ ದಾಖಲೆಗಳಲ್ಲಿ ರಸ್ತೆ ಇರುತ್ತದೆ ಎಂದು ಗ್ರಾಮ ಲೆಕ್ಕಾಧಿಕಾರಿಗಳು ನನಗೆ ತಿಳಿಸಿರುತ್ತಾರೆ. ಕಂದಾಯ ದಾಖಲೆಗಳಲ್ಲಿ ರಸ್ತೆ ಕಂಡು ಬರುತ್ತಿದ್ದರೆ ಅದು ಈ ಪ್ರಕರಣಕ್ಕೆ ಒಂದು ಮುಖ್ಯವಾದ ಸಾಕ್ಷ್ಯ ಎಂದು ನನಗೆ ಅನ್ನಿಸಿರುತ್ತದೆ. ಆ ಕಂದಾಯ ದಾಖಲೆಗಳನ್ನು ಹಾಜರುಪಡಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಕಂದಾಯ ದಾಖಲೆಗಳಲ್ಲಿ ದಾರಿ ಇರುವ ಬಗ್ಗೆ ಕಂಡು ಬರುವುದಿಲ್ಲ ಎಂದು ನುಡಿಯುತ್ತಾರೆ.

12. ಸರ್ವೆ ನಂಬ್ರ 172/1 ಎ ರಲ್ಲಿ ಆ ದಾರಿ ಇದ್ದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳು ನನಗೆ ತಿಳಿಸಿದ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆ ತಯಾರಿಸುವಾಗ ವಕೀಲರಿಗೆ ತಿಳಿಸಿರುತ್ತೇನೆ. ನನ್ನ ಪ್ರಕಾರ ಯಾವುದಾದರೂ ಸರಕಾರಿ ಜಾಗದಲ್ಲಿ ಸಾರ್ವಜನಿಕ ರಸ್ತೆ ಅಥವಾ ದಾರಿ ಇದ್ದರೆ ಪಹಣಿಯ ಕಲಂ.6 ರಲ್ಲಿ ನಮೂದು ಮಾಡಲಾಗುತ್ತದೆ. ಸರ್ವೆ ನಂಬ್ರ 172/1 ಎ ರ ಯಾವುದೇ ಪಹಣಿ ಪತ್ರಿಕೆಯಲ್ಲಿ ದಾರಿ ಇದ್ದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಆಕಾರ್‌ಬಂದ್ ನಲ್ಲಿ ರಸ್ತೆ ಬಗ್ಗೆ ನಮೂದು ಇದ್ದರೆ ಮಾತ್ರ ಪಹಣಿಯ ಕಲಂ.6 ರಲ್ಲಿ ರಸ್ತೆ ಇರುವ ಬಗ್ಗೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಯಾವುದೇ ಸರ್ವೆ ದಾಖಲೆಯಲ್ಲಿಯೂ ಸಹ ಸರ್ವೆ ನಂಬ್ರ 172/1 ಎ ರಲ್ಲಿ ದಾರಿ ಇರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ.

13. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸುವ ಸಮಯ ಈ ಪ್ರಕರಣದ ಪ್ರತಿವಾದಿ.1 ರಿಂದ 3 ರವರ ಲಿಖಿತ ಹೇಳಿಕೆಗಳನ್ನು ನೋಡಿರುತ್ತೇನೆ. ಸದರಿ ಲಿಖಿತ ತಕರಾರು ಹೇಳಿಕೆಯಲ್ಲಿ ಸರ್ವೆ ನಂಬ್ರ 172/1 ಎ ರಲ್ಲಿ ರಸ್ತೆ ಇರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ಲಿಖಿತ ಹೇಳಿಕೆಗಳಿಗೆ ಪೂರಕವಾಗಿ ಹಾಗೂ ಕಡತದ ದಾಖಲೆಗಳನ್ನು ನೋಡಿ ತಯಾರಿಸಲಾಗಿರುತ್ತದೆ. ನಾನು ಹೇಳುವ ಕಡತ ಎಂದರೆ ದಾವಾಗೆ ಸಂಬಂದಪಟ್ಟಂತಹ ಇಲಾಖೆಯಲ್ಲಿ ಇರುವ ಕಡತಗಳು. ನಮ್ಮ ಕಛೇರಿಯಲ್ಲಿರುವ ಕಡತದಲ್ಲಿ ಸಹ ಸರ್ವೆ ನಂಬ್ರ 172/1 ಎ ರಲ್ಲಿ ರಸ್ತೆ ಇರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ಪ್ರಥಮವಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೆ ನಂಬ್ರ 172/1 ಎ ರಲ್ಲಿ ದಾರಿ ಎಂದು ಇದೆ ಹೇಳಿರುತ್ತೇನೆ ಎಂದರೆ ಸರಿ.

14. ವಾದಿಯ ಪ್ರಕಾರ ಸರ್ವೆ ನಂಬ್ರ 172/1 ಎ ರಲ್ಲಿ ಯಾವ ಕಾಲದಿಂದಲೂ ಸಹ ರಸ್ತೆ ಅಥವಾ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸಾರ್ವಜನಿಕರು ಓಡಾಡುವ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಆ ರೀತಿಯ ಯಾವುದೇ ದಾರಿ ಇಲ್ಲದೇ ಇರುವುದರಿಂದ ಕಂದಾಯ ದಾಖಲೆಗಳಲ್ಲಾಗಲಿ ಅಥವಾ ಸರ್ವೆ ದಾಖಲೆಗಳಲ್ಲಾಗಲಿ ದಾರಿ ಅಸ್ತಿತ್ವದಲ್ಲಿ ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ದಾರಿ ಅಸ್ತಿತ್ವದಲ್ಲಿ ಇರದೇ ಇದ್ದುದರಿಂದ ಲಿಖಿತ ತಕರಾರಿನಲ್ಲಿ ದಾರಿಯ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

15. ನಾನು, 4 ನೇ ಪ್ರತಿವಾದಿ ಹಾಗೂ ಸದರಿ ಸರ್ವೆ ನಂಬ್ರ 172/1 ಎ ರ ಪರಿಸರದ ರಿಯಲ್ ಎಸ್ಟೇಟ್ ಉದ್ಯಮಿಗಳ ಪ್ರಭಾವ ಹಾಗೂ ಪ್ರಚೋದನೆಗೆ ಒಳಗಾಗಿ ಸರ್ವೆ ನಂಬ್ರ 172/1 ಎ ರಲ್ಲಿ ರಸ್ತೆ ಇರುತ್ತದೆ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಆ ರಸ್ತೆ, ದಾರಿ ಕಾಲ್ಪನಿಕ, ಎಂದೂ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಿಡಿ.13 ಮತ್ತು 14 ರಂತೆ ಹಾಜರುಪಡಿಸಿರುವ ನಕಾಶೆಯನ್ನು ಸರ್ವೆ ಇಲಾಖೆಯವರು ತಯಾರಿಸಿರುತ್ತಾರೆ, ನನ್ನ ಆದೇಶದಂತೆ. ಸರ್ವೆ ಇಲಾಖೆಗೆ ನಾವು ತಿಳಿಸಿದಂತೆ ನಕ್ಷೆ ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಲುವಾಗಿ ಆ ನಕಾಶೆಯನ್ನು ತಯಾರಿಸಲಾಗಿರುತ್ತದೆ. ಯಾವ ಆಧಾರದ ಮೇಲೆ ನಿಡಿ.13 ಮತ್ತು 14 ನ್ನು ತಯಾರಿಸಲಾಗಿರುತ್ತದೆ ಎಂದು ದಾಖಲೆ ನೋಡಿದರೆ ಗೊತ್ತಾಗುವುದಿಲ್ಲ ಎಂದರೆ ಸರಿ. ಸಾಕ್ಷಿ ಎಫ್.ಎಂ.ಬಿ ಮುಖಾಂತರ ತಯಾರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

16. ನಿಡಿ.13 ಮತ್ತು 14 ಎಫ್.ಎಂ.ಬಿ ಯಂತೆ ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಸರ್ವೆಯವರಲ್ಲಿ ನಕ್ಷೆ ಕೊಡುವಂತೆ ಆದೇಶಿಸಿದಂತಹ ಲಿಖಿತ ಆದೇಶ ಇರುವ ಬಗ್ಗೆ ಪರಿಶೀಲಿಸಬೇಕಾಗುತ್ತದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಪೂರಕವಾಗುವಂತೆ ಪ್ರಚೋದನೆಗೆ ಒಳಪಟ್ಟು ನಿಡಿ.13 ಮತ್ತು 14 ನ್ನು ತಯಾರಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.13 ಮತ್ತು 14 ಮೋಸದ ದಾಖಲೆಗಳು ಎಂದರೆ ಸರಿಯಲ್ಲ.

17. ನಿಡಿ.11 ನ್ನು ಸರ್ವೇಯವರು ತಯಾರಿಸಿರುತ್ತಾರೆ. ನಿಡಿ.11 ನ್ನು ತಯಾರಿಸುವಾಗ ನಾನು ಬ್ರಹ್ಮಾವರ ತಹಶೀಲ್ದಾರರಾಗಿ ಇರಲಿಲ್ಲ, ಯಾರು ತಯಾರಿಸಿರುತ್ತಾರೆ ಎಂದು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.11 ನ್ನು ನೋಡಿ ಯಾರು ಯಾವ ಆಧಾರದ ಮೇಲೆ ತಯಾರಿಸಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಮೂಲ ಪ್ರತಿ ನಮ್ಮ ಕಛೇರಿಯಲ್ಲಿ ಇರುತ್ತದೆ. ನಮೂನೆ-53 ರ ಅರ್ಜಿಗೆ ಸಂಬಂದಪಟ್ಟಂತೆ ಸದರಿ ನಿಡಿ.11 ರ ದಾಖಲೆಯನ್ನು ತಯಾರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನಿಡಿ.11 ರ ಮೂಲ ಪ್ರತಿಯನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ನ್ಯಾಯಾಲಯ ಹೇಳಿದರೆ ಸಲ್ಲಿಸುತ್ತೇನೆ ಎಂದು ನುಡಿಯುತ್ತಾರೆ.

18. ನಿಡಿ.11 ರಲ್ಲಿ ನಮೂನೆ-53 ರ ಅರ್ಜಿಗೆ ಸಂಬಂದಪಟ್ಟಂತೆ ತಯಾರಿಸಲಾಗಿರುತ್ತದೆ ಎಂದು ಕಂಡು ಬರುವುದಿಲ್ಲ ಎಂದರೆ ಸರಿ. ನಮೂನೆ-53 ರ ಅರ್ಜಿಗೆ ಸಂಬಂದಪಟ್ಟಂತೆ ನಿಡಿ.11 ನ್ನು ತಯಾರಿಸಲಾಗಿದ್ದರೆ ಅದರಲ್ಲಿ ಎನ್.ಸಿ.ಆರ್, ಸಿ.ಆರ್ ನಂಬ್ರ ನಮೂದಾಗಿರುತ್ತದೆ ಎಂದರೆ ಸಾಕ್ಷಿ ಎನ್.ಸಿ.ಆರ್, ಸಿ.ಆರ್ ಎಂದು ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಎನ್.ಸಿ.ಆರ್, ಸಿ.ಆರ್ ನಂಬ್ರ 20/1999-2000 ಎಂದು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವಶ್ರೀ ಪೂಜಾರ್ತಿ ಕೋಂ ಗಿರಿಯಾ ಪೂಜಾರಿ ರವರ ಕಡತಕ್ಕೆ ಸಂಬಂದಪಟ್ಟ ದಾಖಲೆಯಾಗಿರುತ್ತದೆ.

19. ನಿಡಿ.11 ರಲ್ಲಿ ಹಳದಿ ಹಾಗೂ ನೀಲಿ ಬಣ್ಣದಲ್ಲಿ ನಿಶಾನೆ ಗುರುತಿಸಿದ್ದು, ಅದು ಮುಖ ಪುಟದಲ್ಲಿ ಕಂಡು ಬರುತ್ತದಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ.11 ನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಎ ಮತ್ತು ಬಿ ಶೆಡ್ಯೂಲ್ ಸ್ವತ್ತುಗಳು ಒಂದಕ್ಕೆ ಒಂದು ತಾಗಿಕೊಂಡು ಇರುವುದಿಲ್ಲ ಎಂಬ ವಿಚಾರ ಎಫ್.ಎಂ.ಬಿ ನಕಾಶೆಯಲ್ಲಿ ಕಂಡು ಬರುತ್ತದೆ. ಸದರಿ ಎಫ್.ಎಂ.ಬಿ ನಕಾಶೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಎಫ್.ಎಂ.ಬಿ ಆಧಾರದ ಮೇಲೆ ನಿಡಿ.14 ನಕಾಶೆಯನ್ನು ಹಾಜರುಪಡಿಸಲಾಗಿದೆ ಎಂದು ನುಡಿಯುತ್ತಾರೆ.

20. ನಾನು ಸುಳ್ಳು ಸಾಧನೆ ಮಾಡುವ ಸಲುವಾಗಿ ನಿಡಿ.14 ರ ನಕಾಶೆಯನ್ನು ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದುರುದ್ದೇಶದಿಂದ ನಾನು ಎಫ್.ಎಂ.ಬಿ

ನಕಾಶೆಯನ್ನು ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ರಸ್ತೆಯ ಅಸ್ತಿತ್ವದಲ್ಲಿ ಇರುವ ಬಗ್ಗೆ ಸರ್ವೆ ನಂಬ್ರ 174/6 ರ ಪಹಣಿ ಪತ್ರಿಕೆಯಲ್ಲಿ ಕಾಣಿಸುವಂತ ಸದರಿ ಪಹಣಿ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಈಗ ಅವಶ್ಯಕತೆ ಇದ್ದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

21. ಸರ್ವೆ ನಂಬ್ರ 174/6 ಪರಂಬೋಕು ತೋಡು ಹಾಗೂ ಕಾಲುದಾರಿ ಇರುತ್ತದೆ. ಪಹಣಿ ಪತ್ರದಲ್ಲಿ ಪರಂಬೋಕು ತೋಡು ಹಾಗೂ ದಾರಿ ಎಂದು ಎರಡರ ನಮೂದು ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ಸಮಯ 1 ನೇ ವಾದಿ ತನ್ನ ಕುಟುಂಬದ ಪರವಾಗಿ ನಮೂನೆ-53 ರ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿತ್ತು. ಸದರಿ ಅರ್ಜಿಗೆ ಸಂಬಂದಪಟ್ಟಂತೆ ಇನ್ನೂ ತೀರ್ಪು ಆಗಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಅವರು ಸಲ್ಲಿಸಿದ ಅರ್ಜಿಗೆ ವಿಚಾರಣೆ ಇರುತ್ತದೆ ಎಂದು ಹೇಳಿರುವುದಿಲ್ಲ, ಅರ್ಜಿ ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತೇನೆ. ಆ ಅರ್ಜಿಯ ಮೇಲೆ ಯಾವ ರೀತಿ ತೀರ್ಮಾನ ಕೈಗೊಳ್ಳಬೇಕು ಎಂಬ ಸಂಪೂರ್ಣ ಅಧಿಕಾರ ಸಮಿತಿಗೆ ಇರುತ್ತದೆ ಹಾಗೂ ಹೊಸ ಕಾಯ್ದೆ ಪ್ರಕಾರ ಜಿಲ್ಲಾಧಿಕಾರಿಗಳಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಅಂತಹ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

22. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದಂತ ಸುತ್ತೋಲೆ ಕಾನೂನು ಬಾಹಿರ ಹಾಗೂ ಕಂದಾಯ ಕಾಯ್ದೆಗೆ ವಿರುದ್ಧವಾದದ್ದು ಎಂದರೆ ಸರಿಯಲ್ಲ. ವಾದಿ ಬಿ ಶೆಡ್ಯೂಲ್ ಸ್ವತ್ತಿಗೆ ಸಂಬಂದಪಟ್ಟಂತೆ ಸಲ್ಲಿಸಿದ ನಮೂನೆ-53 ಕ್ಕೆ ಸಂಬಂದಪಟ್ಟಂತೆ ಪ್ರಾಥಮಿಕ ತನಿಖೆ ಆಗಿರುತ್ತದೆ. ಆ ಅರ್ಜಿಗೆ ಸಂಬಂದಪಟ್ಟಂತೆ ಪ್ರತಿವಾದಿ 1 ರಿಂದ 3 ರವರು ತಮ್ಮ ಲಿಖಿತ ತಕರಾರಿನಲ್ಲಿ ಸಲ್ಲಿಸಿರುವ ವಿಚಾರಗಳು ಸರಿ ಇರುತ್ತವೆ. ದಾವಾ ಬಿ ಶೆಡ್ಯೂಲ್ ಸ್ವತ್ತಿನ ಸುತ್ತಲೂ ಮಣ್ಣಿನ ಧರೆ ಇದ್ದ ಬಗ್ಗೆ ಹಾಗೂ ಮರಗಳು ಇದ್ದ ಬಗ್ಗೆ ವಾದಿಗಳು ತಮ್ಮ ವಾದ ಪತ್ರದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಆ ರೀತಿ ಹೇಳಿರುತ್ತಾರೆ, ಆದರೆ ಅದು ಸುಳ್ಳು ಎಂದು ನುಡಿಯುತ್ತಾರೆ. ಆ ಮಣ್ಣಿನ ಧರೆ ಹಾಗೂ ಮರಗಳ ಬಗ್ಗೆ ಪ್ರತಿವಾದಿ 1 ರಿಂದ 3 ರವರು ಏನು ಲಿಖಿತ ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ಈ ಬಗ್ಗೆ ಪ್ರತಿವಾದಿ 1 ರಿಂದ 3 ರವರು ಲಿಖಿತ ತಕರಾರಿನಲ್ಲಿ ಹೇಳಿದ ವಿಚಾರ ಸರಿ ಇರುತ್ತದೆ.

23. ಮಣ್ಣಿನ ಧರೆ ಇದ್ದ ಬಗ್ಗೆ ಹಾಗೂ ಮರಗಳು ಇದ್ದ ಬಗ್ಗೆ ಪ್ರತಿವಾದಿ 1 ರಿಂದ 3 ನಿರಾಕರಿಸಿರುವುದಿಲ್ಲ ಎಂದರೆ ಸಾಕ್ಷಿ ನಿರಾಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1

ರಿಂದ 3 ತಮ್ಮ ತಕರಾರಿನಲ್ಲಿ ಮಣ್ಣಿನ ಧರೆ ಹಾಗೂ ಮರಗಳಿಗೆ ನಾವು ತಕರಾರು ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ರಿಯಲ್ ಎಸ್ಟೇಟ್ ಏಜೆಂಟರ ಪ್ರಭಾವಕ್ಕೆ ಒಳಗಾಗಿ ಪ್ರತಿವಾದಿ 1 ರಿಂದ 3 ರವರು ಸಲ್ಲಿಸಿದ ಲಿಖಿತ ತಕರಾರಿಗೆ ವಿರುದ್ಧವಾಗಿ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ನಾನು ಹೇಳಿದಂತ ಸಾರ್ವಜನಿಕ ರಸ್ತೆಯನ್ನು ಗಿಡ ಮರಗಳನ್ನೆಲ್ಲ ಹಾಕಿ ಬಂದು ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಆ ರೀತಿ ಸಾರ್ವಜನಿಕರ ರಸ್ತೆ ಬಂದ್ ಮಾಡಿದ ಬಗ್ಗೆ ದೂರು ಸಲ್ಲಿಸಲಾಗಿರುತ್ತದಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

24. ನನಗೆ ಯಾರೂ ಸಹ ನ್ಯಾಯಾಂಗ ನಿಂದನೆ ಬೆದರಿಕೆ ಹಾಕಿರುವ ಬಗ್ಗೆ ಹೇಳಿರುವುದಿಲ್ಲ. ನ್ಯಾಯಾಂಗ ನಿಂದನೆ ಬೆದರಿಕೆ ಹಾಕಿ ರಸ್ತೆ ಬಂದ್ ಮಾಡಲಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿರುತ್ತಾರೆ. ಸಾಕ್ಷಿ ಅಕ್ಕ ಪಕ್ಕ ಮನೆಯವರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ನಾನು ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನಾನು ಹೇಳಿದ ಸಾರ್ವಜನಿಕರ ಹೆಸರು ಹೇಳಲು ಬರುವುದಿಲ್ಲ, ಅಕ್ಕಪಕ್ಕದ ಮನೆಯವರು ಎಂದು ನುಡಿಯುತ್ತಾರೆ.

25. ಸರ್ವೆ ನಂಬ್ರ 174/6ರ ಸರಕಾರದ ಪರಂಬೋಕು ತೋಡನ್ನು ಮುಚ್ಚಿರುವುದಿಲ್ಲ, ಕಿರಿದು ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಸರ್ವೆ ನಂಬ್ರ 174/6ರ ಪರಂಬೋಕು ತೋಡನ್ನು ಮುಚ್ಚಿ ಹಾಕಲಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಎಷ್ಟು ಕಿರಿದು ಮಾಡಿರುತ್ತಾರೆ ಎಂದು ಹೇಳಲು ಸಾಧ್ಯವಿರುವುದಿಲ್ಲ, ಸರ್ವೆ ಮಾಡಿಸಿ ಹೇಳಬೇಕು ಎಂದು ನುಡಿಯುತ್ತಾರೆ. ಅದು ಎಷ್ಟು ಅಗಲ ಇತ್ತು ಹಾಗೂ ಅಗಲದಲ್ಲಿ ಎಷ್ಟು ಕಡಿಮೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಆ ಸಾರ್ವಜನಿಕ ದಾರಿಯ ಮೇಲೆ ಗಿಡ ಇಟ್ಟಿರುವುದಿಲ್ಲ.

ಈ ಸಂದರ್ಭದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ                ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ